## ರಾಗ- ಭಾವಗಳ ಬೆಸುಗೆ

ನಮ್ಮ ಹಿಂದೂಸ್ತಾನಿ ಸಂಗೀತಕ್ಕೆ ಆಳವಾದ ಬೇರುಗಳಿವೆ. ಪಾರಂಪರಿಕ ಸಂಗೀತ ವಿಶ್ವ ಸಂಗೀತದೊಂದಿಗೆ ಸೇರಿ ಜೊತೆ ಜೊತೆಗೆ ಸಾಗಿದಾಗ ನಮಗಷ್ಟೇ ಅಲ್ಲ ವಿಶ್ವದ ಎಲ್ಲ ಸಂಗೀತಪ್ರೇಮಿಗಳ ಹೃದಯವನ್ನು ಅದು ತಟ್ಟುತ್ತದೆ.

ರಾಗ ಬೈರವ್, ಭಿಬಾಸ್, ಬೃಂದಾವನಿ ಸಾರಂಗ್ ಸೇರಿದಂತೆ ಎಲ್ಲ ರಾಗಗಳ ಬಂದಿಶ್‌ಗಳು ಚೀನಾದ ಸಂಗೀತದೊಂದಿಗೆ ಬೆರೆತಾಗ ಅಲ್ಲಿ ಅದ್ಭುತ ರಸಪಾಕ ಸೃಷ್ಟಿಯಾಗುತ್ತದೆ. ನಾನು ಬಂದೀಶ್ ಅನ್ನು ಪ್ರಸ್ತುತಪಡಿಸುವಾಗ ಚೀನೀ ಸಂಗೀತಗಾರ ಯಾಚೀ ಎಂಬ ವಾದ್ಯ ನುಡಿಸುತ್ತಾನೆ. ಸಂತೂರ್ ಮಾದರಿಯ ಈ ವಾದ್ಯವನ್ನು ನುಡಿಸುವಾಗ ಎರಡೂ ರೀತಿಯ ಸಂಗೀತದ ಸಮಾಗಮವಾಗುತ್ತದೆ. ಇದು ಕೇಳಲು ಸೊಗಸಾಗಿರುತ್ತದೆ. ನಾವು ಹೋದ ಶಾಂಘೈ, ಹಾಂಕಾಂಗ್‌ಗಳಲ್ಲೂ ಸಂಗೀತ ಕೇಳಲು ಜನ ಮುಗಿಬಿದ್ದಿದ್ದರು. ಎಂಥದೋ ಒಂದು ಮಾಧುರ್ಯ, ಸೆಳೆತ, ಆಕರ್ಷಣೆ ಸಂಗೀತಕ್ಕಿದೆ.

**-ಓಂಕಾರ್ ಹವಾಲ್ದಾರ್, ಗಾಯಕ**



ಸಂತೂರ್‌ನಲ್ಲಿ ಸ್ವರಾಲಾಪ ಮಾಡುತ್ತಿರುವ ಚೀನಾದ ಕಿಮ್ಹೊ ಹಾಗೂ ಬೆಂಗಳೂರಿನ ಓಂಕಾರ ಹವಾಲ್ದಾರ

ಎಂಬ ವಿಷಯವನ್ನೇ ಆಧಾರವಾಗಿಟ್ಟುಕೊಂಡು ಸಾಕ್ಷ್ಯಚಿತ್ರ ನಿರ್ಮಾಪಕಿ ಸುರಭಿ ಶರ್ಮ ಅವರ ಜೊತೆಗೂಡಿ 2015ರಲ್ಲಿ 'ಫಿರ್ ಸೆ ಸಂ ಪೆ ಆನಾ' (ರಿಟರ್ನಿಂಗ್ ಟು ದ ಫಸ್ಟ್ ಬೀಟ್) ಎಂಬ ಡಾಕ್ಯುಮೆಂಟರಿ ಫಿಲ್ಮ್ ಮಾಡಿದೆವು. ಸಂಗೀತದ ಬಗ್ಗೆ ಅನೇಕ ವಿಷಯಗಳು ಈ ಕಿರುಚಿತ್ರದಲ್ಲಿದೆ. ಈ ಸಿನಿಮಾ ರಿಲೀಸ್ ಆಗೋದಕ್ಕೆ ಮೊದಲು ವಿಡಿಯೊ ಫೂಟೇಜ್ ತಗೊಂಡು ಮುಂಬಯಿಯಲ್ಲೇ ಒಂದು ಆರ್ಟ್ ಎಕ್ಸಿಬಿಷನ್ ಮಾಡಿದ್ವಿ. ಅಲ್ಲಿನ ಆರ್ಕಿಟೆಕ್ಟ್ ಜತೆ ಕೆಲಸ ಮಾಡಿ ಗಿರ್‌ಗಾಂವ್ ಏರಿಯಾದ ಫೋಟೊ ಹಾಕಿದ್ವಿ. ಇದೇ ವಿಷಯಗಳ ನಕಾಶೆಯೊಂದನ್ನು ತಯಾರಿಸಿ ನೋಡಲು ಬಂದವರಿಗೆ ಕೆಲವೊಂದು ಮಾಹಿತಿ ಕೊಟ್ಟಿದ್ವಿ. ಸುಮಾರು 800 ಜನ ಬಂದಿದ್ರು. ಬಹಳಷ್ಟು ಜನ ಗಿರ್‌ಗಾಂವ್ ವಾಸಿಗಳೇ. ಉಳಿದಿದ್ದ ಮಾಹಿತಿ ಬರೆಯಲು ಕೆಲವು ಬ್ಲಾಂಕ್ ಕಾರ್ಡ್ ಇಟ್ಟು ಈ ರಸ್ತೆ ನೋಡಿ, ಇದರ ಬಗ್ಗೆ ನಿಮಗೆ ಏನಾದ್ರೂ ನೆನಪಿದ್ಯಾ? ನೆನಪಿದ್ರೆ ಹೆಸರು ಬರೆಯಿರಿ ಎಂದೆವು. ಪ್ರದರ್ಶನ ನೋಡಲು ಬಂದವರೆಲ್ಲ 'ಇಲ್ಲಿ ಸಂಗೀತ ಕೇಳಿದ ನೆನಪಿದೆ, ಇಲ್ಲಿ ಗಂಗೂಬಾಯಿ ಹಾನಗಲ್ ಬಂದು ಹಾಡಿದ್ರು, ಸಂಗೀತಮಯವಾಗಿತ್ತು ಈ ಊರು' ಎಂದೆಲ್ಲ ಬರೆದು ಕಾರ್ಡ್ ಪೇಸ್ಟ್ ಮಾಡಿ ಹೋದರು. ಇದರಿಂದ ನಮಗೆ ಮತ್ತಷ್ಟು ಮಾಹಿತಿ ಸಿಕ್ಕ ಹಾಗಾಯಿತು.

ಮುಂದೆ 2016ರಲ್ಲಿ ಚೀನಾದ ಶಾಂಘೈನಲ್ಲಿ ಬಿನಾಲೆ (ವಿಷುವಲ್ ಆರ್ಟ್) ಉತ್ಸವದಲ್ಲಿ ಈ ಪ್ರದರ್ಶನದ ವಿಡಿಯೊ ತೋರಿಸಿದ್ವಿ. ಅಲ್ಲಿಗೆ ಬೆಂಗಳೂರಿನ ಹಿರಿಯ ಹಿಂದೂಸ್ತಾನಿ ಗಾಯಕಿ ಲಲಿತ್ ರಾವ್, ರುತುಜಾ ಲಾಡ್, ಬಿಂದುಮಾಲಿನಿ

> ಸಂಗೀತದಲ್ಲಿ ಸ್ವರಗಳು ಎಲ್ಲ ಕಡೆ ಒಂದೆಯಾದರೂ ಅದನ್ನು ಪ್ರಸ್ತುತಪಡಿಸುವ ರೀತಿ ಮಾತ್ರ ಭಿನ್ನ. ನಾವು ಹೋದಲ್ಲೆಲ್ಲ ಉತ್ತಮ ಪ್ರತಿಕ್ರಿಯೆ ಬಂದಿದ್ದು, ಸಂಗೀತ ಬಾಂಧವ್ಯ ಬೆಸೆಯುವ ಸಾಧನ ಎಂಬುದನ್ನು ಮಾತ್ರ ಸಾರುತ್ತದೆ. ಹಿಂದೂಸ್ತಾನಿ ಸಂಗೀತವನ್ನು ಪಂ. ದುಂಡುತಾತಿ ಕುಲಕರ್ಣಿ ಅವರ ಬಳಿ ಕಲಿತ ಬಳಿಕ ಸದ್ಯ ವಿದುಷಿ ಅಶ್ವಿನಿ ಭಿಡೆ ದೇಶಪಾಂಡೆ ಅವರ ಬಳಿ ಸಂಗೀತ ಕಲಿಯುತ್ತಿದ್ದೇನೆ. ಸಾತ್ ಸಾತ್ ಸಂಗೀತ ತಂಡದಲ್ಲಿ ಸಕ್ರಿಯ ಕಲಾವಿದೆಯಾಗಿರುವುದು ಹೆಮ್ಮೆ ಅನಿಸುತ್ತಿದೆ.
>
> **-ರುತುಜಾ ಲಾಡ್**, ಗಾಯಕಿ

ಓಂಕಾರ್ ಮುಂತಾದವರನ್ನು ಕರ್ಕೊಂಡು ಹೋಗಿ ಅಲ್ಲೊಂದು ಸಂಗೀತ ಕಛೇರಿ ಏರ್ಪಡಿಸಿದೆವು. ಚೀನೀ ಕಲಾವಿದರನ್ನು ಕರೆಸಿದ್ದಲ್ಲದೆ ಇನ್ನೂ ಕೆಲವು ಚೀನಾದ ಸಂಗೀತಗಾರರನ್ನು ಭೇಟಿ ಮಾಡಿ 'ನಮ್ಮ ಸಂಗೀತ ನಿಮಗೆ ಏನು ಅನಿಸುತ್ತೆ' ಅಂತ ಕೇಳಿದ್ವಿ. ಅವರು ತುಂಬ ಖುಷಿಪಟ್ಟರು. ಅಲ್ಲೊಬ್ಬ ಸಂಗೀತಗಾರ ಭಾರತೀಯ ಸಂಗೀತ ಕಲಿತಿದ್ದ. ಆತ 'ಪಿಪಾ' ಎಂಬ ಚೀನೀ ವಾದ್ಯದಲ್ಲಿ ನಮ್ಮ ಯಮನ್ ರಾಗ ನುಡಿಸಿದ. ನಮ್ಮ ಕಲಾವಿದರು ಹಾಡುವಾಗ ಆತ ಅಲ್ಲಿನ ವಾದ್ಯದಲ್ಲಿ ಸಾಥಿ ನೀಡಿದ. ಇದನ್ನೆಲ್ಲ ನೋಡಿದಾಗ ಥಟ್ಟನೆ ಹೊಳೆದದ್ದು ಭಾರತ–ಚೀನಾ ಸಂಗೀತವನ್ನು ಒಂದೇ ವೇದಿಕೆಗೆ ತಂದರೆ ಹೇಗೆ ಎಂಬ ಆಲೋಚನೆ. ಇದರ ಪ್ರತಿಫಲವೇ 'ಸಾತ್ ಸಾತ್ ಸಂಗೀತ...!''

''2017ರಿಂದ ಹಾಂಕಾಂಗ್‌ನಲ್ಲಿ ಇದೇ ತರದ ಸಂಗೀತ ಕಛೇರಿ ಮಾಡ್ತಾ ಇದ್ದೀವಿ. ಸಾತ್ ಸಾತ್ ಸಂಗೀತ ಮೂರು ವರ್ಷಗಳಿಂದ ಅನೇಕ ಪ್ರಯೋಗಗಳನ್ನು ಮಾಡಿದೆ. ದಕ್ಷಿಣ ಚೀನಾದಲ್ಲಿ ಮಾತನಾಡುವ ಕ್ಯಾಂಟೋನೀಸ್ ಎಂಬ ಭಾಷೆ, ಚೀನಾದ ಆಡಳಿತ ಭಾಷೆ ಮ್ಯಾಂಡರಿನ್‌ಗಳಲ್ಲಿ ಸಂಗೀತ ಕೇಳಿದ್ದೆವು. ಶಾಂಘೈ, ಬೀಜಿಂಗ್‌ಗಳಲ್ಲೂ ಎರಡೂ ಸಂಗೀತವನ್ನು ಕೊಲಾಬರೇಟ್ ಮಾಡಿ ಪ್ರಯೋಗ ಮಾಡಿದ್ದೆವು. ಅಲ್ಲಿನ ಸಂಗೀತ ನಮ್ಮೊಂದಿಗೆ ಬೆರೆತದ್ದು ಇಲ್ಲಿನವರಿಗೂ ಗೊತ್ತಾಗಲಿ ಅಂತ ಬೆಂಗಳೂರು, ಮುಂಬಯಿಯಲ್ಲಿ ಕಾರ್ಯಕ್ರಮ ಮಾಡಿದ್ವಿ. ಈ ಎಲ್ಲ ಶ್ರಮ ಸಾರ್ಥಕವಾದದ್ದು ಹೋದಲ್ಲೆಲ್ಲ ಜನ ಮೆಚ್ಚುಗೆ ವ್ಯಕ್ತಪಡಿಸಿದ್ದನ್ನು ನೋಡಿದಾಗ. ಸಾತ್ ಸಾತ್ ಸಂಗೀತ ಸಂಗೀತ ಕಲಾವಿದರನ್ನು, ದೇಶವನ್ನು, ಭಾಷೆಯನ್ನು ಎಲ್ಲಕ್ಕಿಂತ ಮಿಗಿಲಾಗಿ ಹೃದಯ–ಹೃದಯವನ್ನು ಬೆಸೆದಿದೆ.''

ತೇಜಸ್ವಿನಿ ನಿರಂಜನ ಅವರ ಮಾತುಗಳನ್ನು ಕೇಳುತ್ತಿದ್ದರೆ, ಅವರ ಮಾತುಗಳು ಸಂಗೀತದ ರೂಪು ತಾಳಿ ಸಹೃದಯರನ್ನು ಆವರಿಸಿಕೊಂಡಂತೆ ಕಾಣಿಸುತ್ತದೆ. ಹೌದಲ್ಲವೇ, ಜಗವೆಲ್ಲ ತಬ್ಬುವ ತಾಯಿಗುಣ ಸಂಗೀತಕ್ಕೂ ಇದೆಯಲ್ಲವೇ?